## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/41/2014-15 ದಿ:01-08-2016

ವಾದಿಗಳು

1.ಡಿ.ಸತೀಷ್‌ಕುಮಾರ್ ತಂದೆ ಡಿ.ಅಮ್ಮಿರಾಜು
ನಂ:749, ವಿವೇಕಾನಂದನಗರ ಕಾಲೋನಿ.
ಕುಕ್ಕುಟಪಲ್ಲಿ, ಹೈದ್ರಾಬಾದ್-500 072.

2. ಹೆಚ್.ಎಸ್.ದೇವರಾಜಗೌಡ ತಂದೆ
ಹಳೇಮನೆ ಸಣ್ಣ ವೀರಭದ್ರಪ್ಪ, ವತ್ತುಮುರುಣಿ.

ವಿರುದ್ಧ

ಪ್ರತಿವಾದಿಗಳು

1.ಮಾರ್ಕಪ್ಪ, 2.ರಾಜಕುಮಾರ್
ತಂದೆ ಹೆಚ್.ಪ್ರಭುದಾಸ.
3.ವಸಂತಕುಮಾರಿ ಗಂಡ ಜಾನ್
-ವಿಲಿಯಂ. ಹಚ್ಚೊಳ್ಳಿ.

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ವತ್ತುಮುರುಣಿ | 53/ಎ | 0-40 | ಖುಷ್ಕಿ |
| | | 54/ಎ/1 | 3-17 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ವತ್ತುಮುರುಣಿ ಗ್ರಾಮದ ಸ,ನಂ.53/ಎ, ವಿ:0-40, ಸ,ನಂ.54/ಎ/1, ವಿ:3-17 ಎಕ್ರೆ ಜಮೀನನ್ನು **ಹೆಚ್.ಎಸ್.ದೇವರಾಜಗೌಡ ತಂದೆ ಹಳೇಮನೆ ಸಣ್ಣ ವೀರಭದ್ರಪ್ಪ** ಇವರಿಂದ **ಡಿ.ಸತೀಷ್‌ಕುಮಾರ್ ತಂದೆ ಡಿ.ಅಮ್ಮಿರಾಜು** ಇವರು ಕ್ರಯ ನೋಂದಣಿ ದಸ್ತಾವೇಜು ಸಂಖ್ಯೆ:2828/14-15 ದಿ:06-08-2014 ರ ಪ್ರಕಾರ ಕ್ರಯ ಹೊಂದಿರುವ ಮೇರೆಗೆ ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಹಚ್ಚೊಳ್ಳಿ ಇವರಿಗೆ ಚೆಕ್‌ಲೀಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ವತ್ತುಮುರುಣಿ ಇವರು ಗ್ರಾಮದಲ್ಲಿ ಪ್ರಚುರ ಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿ ಮುಂಚೆ ಪ್ರತಿವಾದಿಗಳಾದ **1.ಮಾರ್ಕಪ್ಪ, 2.ರಾಜಕುಮಾರ್ ತಂದೆ ಹೆಚ್.ಪ್ರಭುದಾಸ 3.ವಸಂತಕುಮಾರಿ ಗಂಡ ಜಾನ್ ವಿಲಿಯಂ** ಇವರು ದಿನಾಂಕ:28-08-2014 ರಂದು, "ದಾವಾ ಜಮೀನುಗಳನ್ನು ಹಾಲಿ ಪಟ್ಟಾದಾರರು ಮಾರ್ಕಪ್ಪ ಇವರಿಗೆ ದಿ:13-01-2010 ರಂದು ವಿಕ್ರಯ ಕರಾರು ಪತ್ರದ ಮೂಲಕ ಬರೆದುಕೊಟ್ಟು, ಈಗ ಬೇರೆಯವರಿಗೆ ನೋಂದಣಿ ಮಾಡಿಸಿದ್ದು, ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ಪರಿವೀಕ್ಷಕರು ಹಚ್ಚೊಳ್ಳಿ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:06/2014-15 ದಿ:15-09-2014 ರ ಪ್ರಕಾರ ತಾಲೂಕು ಕಛೇರಿಗೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:15-11-2014 ರಿಂದ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರವರ ನ್ಯಾಯಾಲಯ

58

21-03-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಗಿರುತ್ತದೆ. ವಾದಿ/ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಪ್ರಕರಣಕ್ಕೆ ಸಂಭಂದಿಸಿದಂತೆ ದಾಖಲೆಗಳನ್ನು ಪರಿಶೀಲಿಸಲಾಗಿ, ತಕರಾರುದಾರರು ದಿನಾಂಕ:13/01/2010 ರಂದು ನೋಂದಾಯಿತವಲ್ಲದ ದಸ್ತಾವೇಜು ಪ್ರಕಾರ ಪ್ರಸ್ತಾಪಿತ ಜಮೀನನ್ನು ಖರೀದಿಸಲು ಕರಾರು ಪತ್ರ ಮಾಡಿಕೊಂಡಿದ್ದು, ವಾದಿಗಳು ದಿನಾಂಕ:05-08-2014 ರಂದು ಜಮೀನನ್ನು ಖರೀದಿಗೆ ಪಡೆದಿರುತ್ತಾರೆ. ಅಂದರೆ ಕರಾರು ಪತ್ರ ಮಾಡಿಕೊಂಡ ನಾಲ್ಕು (4) ವರ್ಷ ಆರು (6) ತಿಂಗಳ ನಂತರ ಖರೀದಿ ವ್ಯವಹಾರ ನಡೆದಿರುತ್ತದೆ. ಸುಧೀರ್ಘ ಅವಧಿಯ ನಂತರ ಕ್ರಯ ವ್ಯವಹಾರ ಜರುಗಿದ್ದು, ತಕರಾರುದಾರರು, ಸದ್ರಿ ಜಮೀನನ್ನು ನೋಂದಾಯಿಸಿಕೊಳ್ಳಲು ಯಾವುದೇ ಪ್ರಯತ್ನಗಳನ್ನು ಮಾಡದೇ ಇರುವುದು ಕಂಡು ಬರುತ್ತದೆ. ಮೇಲಾಗಿ ತಕರಾರುದಾರರು ಈ ಬಗ್ಗೆ ಸೂಕ್ತ ಸಿವಿಲ್ ನ್ಯಾಯಾಲಯದಲ್ಲಿ **"Suit for Specific Performance"** ದಾವೆ ಹೂಡಿ ಪರಿಹಾರ ಕಂಡುಕೊಳ್ಳಬೇಕಾಗಿರುತ್ತದೆ.

ಹಾಲಿ ನೋಂದಾಯಿತ ದಸ್ತಾವೇಜು ಪ್ರಕಾರ ಮತ್ತು ಮಾನ್ಯ ಉಚ್ಛ ನ್ಯಾಯಾಲಯವು ಪ್ರಕರಣವೊಂದರ ಸಂಖ್ಯೆ:ILR 2000 Kar/183/2000 (4) KCCRSN 186 ರ ಪ್ರಕಾರ ಯಾವುದೇ ನೋಂದಾಯಿತ ದಸ್ತಾವೇಜಿನ ಪ್ರಕಾರ ತಹಶೀಲ್ದಾರರು ಹಕ್ಕುಬದಲಾವಣೆ ಮಾಡಬೇಕೆಂದು ನಿರ್ದೇಶನ ನೀಡಿರುತ್ತದೆ. ಕಾರಣ ಸದ್ರಿ ಪ್ರಕರಣದಲ್ಲಿ ಈ ಕೆಳಕಂಡಂತೆ-

**ಸಂ.ಕಂ/ಹಬ/ವಿವಾದ/41/2014-15** **ದಿ:01-08-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ಗ್ರಾಮ ವತ್ತುಮುರುಣಿ ಗ್ರಾಮದ ಸ,ನಂ.53/ಎ, ವಿ:0-40, ಸ,ನಂ.54/ಎ/1, ವಿ:3-17 ಎಕ್ರೆ ಜಮೀನನ್ನು **ಹೆಚ್.ಎಸ್.ದೇವರಾಜಗೌಡ ತಂದೆ ಹಳೇಮನೆ ಸಣ್ಣ ವೀರಭದ್ರಪ್ಪ** ಇವರಿಂದ ಕ್ರಯ ನೋಂದಣಿ ದಸ್ತಾವೇಜು ಸಂಖ್ಯೆ:2828/14-15 ದಿ:06-08-2014 ರ ಪ್ರಕಾರ, ನೋಂದಾಯಿತ ದಸ್ತಾವೇಜಿನ ಮೇರೆಗೆ ಕ್ರಯ ಹೊಂದಿರುವ **ಡಿ.ಸತೀಷ್‌ಕುಮಾರ್ ತಂದೆ ಡಿ.ಅಮ್ಮಿರಾಜು** ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶದಿಂದ ಪ್ರತಿವಾದಿಗಳು ಬಾಧಿತರಾಗಿದ್ದಲ್ಲಿ, ಸಿವಿಲ್ ನ್ಯಾಯಾಲಯ ಮೊರೆಹೋಗಿ ಪರಿಹಾರ ಕಂಡುಕೊಳ್ಳಲು ತಿಳಿಸಲಾಗಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ **ದಿ:01-08-2016** ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

"Attested copy"

ರಾಜ ಕುಮಾರ್